ಎಸ್.ಸಿ.ನಂ.139/2019
ಚಾ.ಸಾ.2/ಪ್ರಾ.ಸಾ.4

**ತಾ:19-12-2022 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 5 ನೇ ಆರೋಪಿಪರ ಶ್ರೀ.ಎಮ್.ಆರ್.ಎನ್.ವಕೀಲರಿಂದಃ**

1. ನಾನು ಕಾರಿನ ಮಾಲೀಕ ಹಾಗೂ ಚಾಲಕನಾಗಿರುತ್ತೇನೆ ಎಂದರೆ ಸರಿ. ನಾನು ಕಾರನ್ನು ಬಾಡಿಗೆಗೆ ಓಡಿಸುವುದಿಲ್ಲ, ಆದರೆ ಸ್ವಂತಕ್ಕೆ ಉಪಯೋಗಿಸುತ್ತೇನೆ. ಮೃತ ನಬಾಜ್ ಇವರು ಕ್ಯಾಂಟರ್ ಲಾರಿ ಇಟ್ಟುಕೊಂಡಿದ್ದು, ಅವರು ಗಾಡಿಯ ಮಾಲೀಕ ಹಾಗೂ ಚಾಲಕರಾಗಿದ್ದರು ಎಂದರೆ ಸರಿ. ಮೃತ ನವಾಜ್ ಇವರು ಬೇರೆ ರಾಜ್ಯಕ್ಕೆ ವಾಹನವನ್ನು ಬಾಡಿಗೆಗೆ ತೆಗೆದುಕೊಂಡು ಹೋದಲ್ಲಿ ಒಂದುವಾರ ಮನೆಯಿಂದ ಹೊರಗೆ ಇರುತ್ತಾರೆ ಎಂದರೆ ಸರಿ. ಮೃತ ನವಾಜ್ ನನ್ನ ಸಂಬಂಧಿಕರಾಗಿರುತ್ತಾರೆ, ಅಂದರೆ ನನ್ನ ಸಂಬಂಧಿಕ ಅಣ್ಣನ ಮಗನಾಗಿರುತ್ತಾರೆ.

2. ನಾನು Whitefield ನಿವಾಸಿ ಎಂದರೆ ಸರಿ. ಮೃತ ನಬಾಜ್ ಇವರೂ ಸಹ Whitefield ನಲ್ಲಿ ವಾಸ ಇದ್ದರು. ನನ್ನ ಮನೆಯಿಂದ ನವಾಜ್ ಇವರ ಮನೆ ಅರ್ಧ ಕಿ.ಮೀ. ದೂರ ಇತ್ತು. ನವಾಜ್ ಇವರ ಮನೆಯಲ್ಲಿ ಒಟ್ಟು 5 ಜನರು ಒಟ್ಟಾಗಿ ವಾಸಿಸುತ್ತಿದ್ದರು. ನಾನು ನವಾಜ್ ಇವರ ಮನೆಗೆ ಹೋಗಿ ಬಂದು ಮಾಡುತ್ತಿದ್ದೆನು. ನವಾಜ್ ಇವರು ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿರಲಿಲ್ಲ.

3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಮೊದಲಿಗೆ ದಿನಾಂಕ

21-08-2018 ರಂದು ಚಿಂತಾಮಣಿಯಲ್ಲಿದ್ದ ATM ಗೆ ಹೋಗಿದ್ದೆನು. ಸದರಿ ATM ಸೆಂಟರ್ ಇದ್ದ ಬಡಾವಣೆಯ ಹೆಸರು ನನಗೆ ತಿಳಿದಿಲ್ಲ, ಆದರೆ ಅದು ಚಿಂತಾಮಣಿ ಊರಿನ ಮುಖ್ಯ ರಸ್ತೆಯಲ್ಲಿರುತ್ತದೆ. ನಾನು ವಾಸ ಮಾಡುತ್ತಿರುವ ಮನೆಯಿಂದ ನಾನು ಹೇಳಿದ ಚಿಂತಾಮಣಿ ATM ಸೆಂಟರ್ ಗೆ 80 ಕಿ.ಮೀ ದೂರ ಇರುತ್ತದೆ ಎಂದರೆ ಇರಬಹುದು. ಸದರಿ ATM ಗೆ ಒಬ್ಬ ಕಾವಲುಗಾರ ಇದ್ದರು ಎಂದರೆ ಸರಿ. ATM ಸೆಂಟರ್ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ATM ಸೆಂಟರ್ ಮುಂಭಾಗದಲ್ಲಿರುವ ಮುಖ್ಯರಸ್ತೆಯಲ್ಲಿ ಬೆಳಿಗ್ಗೆ 06:00 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಜನ ಸಂಚಾರು ಹಾಗೂ ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಚಿಂತಾಮಣಿ ತಾಲ್ಲೂಕು ಆಗಿರುತ್ತದೆ ಎಂದರೆ ಸರಿ.

4. ATM ಸೆಂಟರ್ ಅಕ್ಕಪಕ್ಕದಲ್ಲಿ ಅಂಗಡಿಗಳು ಇರುತ್ತವೆ. ಪೋಲೀಸರು ATM ಅಕ್ಕಪಕ್ಕದಲ್ಲಿದ್ದ ಅಂಗಡಿಯವರನ್ನು ಸ್ಥಳಕ್ಕೆ ಕರೆದಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಸದರಿ ಸ್ಥಳದಲ್ಲಿ ಮಾಡಿದ ಬರವಣಿಗೆಗೆ ಅಕ್ಕಪಕ್ಕದವರ ಸಹಿ ಪಡೆದಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಸದರಿ ಸ್ಥಳದಲ್ಲಿ ನಾನು ಹಾಗೂ ಪೋಲೀಸರು ಸುಮಾರು 12:00 ಗಂಟೆಯಿಂದ ಮಧ್ಯಾಹ್ನ 01:00 ಗಂಟೆಯವರೆಗೆ ಇದ್ದೆವು. ನಾನು ಸಾಕ್ಷಿಯಾಗಿ ಬರುವಂತೆ ಪೋಲೀಸರು ನನಗೆ ಯಾವುದೇ ನೋಟೀಸ್ ನೀಡಿರಲಿಲ್ಲ. ನಾನು ಆ ದಿನ ಸದರಿ ಸ್ಥಳಕ್ಕೆ ಆರೋಪಿತರು ಹಾಗೂ 4 ಜನ ಪೋಲೀಸರ ಜೊತೆ ಹೋಗಿದ್ದೆನು. ಆ ದಿನ ಜೀಪನ್ನು ಚಾಲಕ ಚಲಾಯಿಸುತ್ತಿದ್ದು, ಪೋಲೀಸ್ ಇನ್ಸ್ ಪೆಕ್ಟರ್ ರವರು ಜೀಪಿನ ಮುಂಭಾಗದಲ್ಲಿ

ಕುಳಿತಿದ್ದರು ಎಂದರೆ ಸರಿ. ಪೋಲೀಸ್ ಇನ್ಸ್ ಪೆಕ್ಟರ್ ರವರು ಜೀಪ್ ಚಾಲಕನಿಗೆ ATM Center ತೋರಿಸಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಾವು ಚಿಂತಾಮಣಿಗೆ ಹೋದಂತರ ಜೀಪ್ ನಂಬರ್ ತಿಳಿದಿಲ್ಲ. ಆ ದಿನ ನನ್ನ ಜೊತೆ ಬೆಂಗಳೂರಿನಿಂದ ಬೇರೆ ಯಾರೂ ಸಾಕ್ಷಿದಾರರು ಚಿಂತಾಮಣಿಗೆ ಬಂದಿರಲಿಲ್ಲ. ಸಾಕ್ಷಿದಾರರಿಗೆ ಆರೋಪಿಪರ ವಕೀಲರು ಒಬ್ಬ ಆರೋಪಿಯನ್ನು ತೋರಿಸಿ ಆತನ ಹೆಸರು ಏನು ಎಂದು ಕೇಳಿದಾಗ ಅವರ ಹೆಸರು ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯವು ಸದರಿ ಆರೋಪಿಯನ್ನು ಹೆಸರು ಕೇಳಿದಾಗ ಆ ವ್ಯಕ್ತಿ ತನ್ನ ಹೆಸರು ರಕ್ಷಿತ್ (ಎ 4) ಎಂದು ತಿಳಿಸಿರುತ್ತಾರೆ. ಸಾಕ್ಷಿದಾರರಿಗೆ ಮತ್ತೊಬ್ಬ ಆರೋಪಿಯ ಹೆಸರನ್ನು ಕೇಳಿದಾಗ ಆತನ ಹೆಸರು ಪವನ್ ಆಗಿರುವುದಾಗಿ ನುಡಿದಿದ್ದು, ಸದರಿ ವ್ಯಕ್ತಿಯನ್ನು ನ್ಯಾಯಾಲಯವು ಪ್ರಶ್ನಿಸಿದಾಗ ತನ್ನ ಹೆಸರು ಪವನ್ ಎಂದು ಉತ್ತರಿಸಿರುತ್ತಾರೆ.

5. ನಿಪಿ.30 ಮಹಜರ್ ನಲ್ಲಿ ಬರೆದ ವಿಚಾರಗಳು ನನಗೆ ತಿಳಿದಿರುತ್ತದೆ. ನಿಪಿ.30 ಮಹಜರ್ ಅನ್ನು ಯಾರು ಬರೆದಿರುತ್ತಾರೆಂದು ನನಗೆ ತಿಳಿದಿಲ್ಲ. ನಿಪಿ.30 ಅನ್ನು ಬರೆದವರು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನಿಪಿ.30 ಕ್ಕೆ ಎಷ್ಟು ಜನ ಸಹಿ ಮಾಡಿರುತ್ತಾರೆ ಹಾಗೂ ಯಾರು ಯಾರು ಸಹಿ ಮಾಡಿರುತ್ತಾರೆಂದು ನನಗೆ ತಿಳಿದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಠಾಣೆಗೆ 2-3 ಬಾರಿ ಹೋಗಿದ್ದೆನು. ನೀವು ವರ್ತೂರು ಪೋಲೀಸ್ ಠಾಣೆಯಲ್ಲಿ ಎಷ್ಟುಬಾರಿ ಸಹಿ ಮಾಡಿರುತ್ತೀರೀ ಎಂದರೆ ಸಾಕ್ಷಿಯು ನಾನು ಸಹಿ ಮಾಡಿದ್ದು, ಎಷ್ಟುಬಾರಿ ಎಂದು ನನಗೆ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ.

ಸಾಕ್ಷಿದಾರರಿಗೆ ನಿಪಿ.30 ರ ದಾಖಲೆಯನ್ನು ತೋರಿಸಿ ಅದಕ್ಕೆ ವರ್ತೂರು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುವುದಾಗಿ ಸೂಚಿಸಿದ್ದು, ಅದಕ್ಕೆ ಸಾಕ್ಷಿಯು ಬ್ಯಾಂಕ್ ಬಳಿ ಸಹಿ ಮಾಡಿರುವುದಾಗಿ ಉತ್ತರಿಸಿರುತ್ತಾರೆ.

6. ಚಿಂತಾಮಣಿಯಲ್ಲಿ ಸಹಿ ಮಾಡಿದ ನಂತರ ಎಷ್ಟುಬಾರಿ ಪೋಲೀಸ್ ಠಾಣೆಗೆ ಹೋಗಿದ್ದಿರಿ ಎಂದರೆ ಸಾಕ್ಷಿಯು 2-3 ದಿವಸಗಳ ನಂತರ ಪೋಲೀಸ್ ಠಾಣೆಗೆ ಮೃತ ದೇಹ ನೋಡಲು ಹೋಗಿದ್ದೆನು ಎಂದು ನುಡಿದಿರುತ್ತಾರೆ. ಅದು ಯಾವ ದಿನಾಂಕ ಎಂದು ನಿಖರವಾಗಿ ಹೇಳಲು ನನಗೆ ಆಗುವುದಿಲ್ಲ. ನಾನು 2 ನೇ ಬಾರಿ ಪೋಲೀಸ್ ಠಾಣೆಗೆ ಭೇಟಿ ನೀಡಿದ ಸಮಯದಲ್ಲಿ ಪೋಲೀಸರು ನನಗೆ ನೋಟೀಸ್ ಅಥವಾ ಮೆಮೋ ನೀಡಿಲ್ಲ. ನಾನು ಘಟನೆಯನ್ನು ಖುದ್ದಾಗಿ ನೋಡಿಲ್ಲ. ಪೋಲೀಸರಿಗೆ ಘಟನೆ ಆದ ನಂತರ ನನ್ನ ಮನೆಯ ನಂಬರ್ ತಿಳಿದಿದ್ದು, ನನ್ನ ಮೊಬೈಲ್ ನಂಬರ್ ತಿಳಿದಿಲ್ಲ. ನಾನು ಪೋಲೀಸ್ ಠಾಣೆಗೆ ಹೋದಾಗ ಠಾಣೆಯಲ್ಲಿ 3-4 ಜನ ಸಾರ್ವಜನಿಕರು ವಾಸ ಇದ್ದರು. ಪೋಲೀಸರು ನನ್ನ ಮುಂದೆ ಆರೋಪಿತರ ಹೇಳಿಕೆಯನ್ನು ಬರೆದುಕೊಂಡರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ.

7. 1 ಮತ್ತು 5 ನೇ ಆರೋಪಿತರ ನಡುವೆ ಅನೈತಿಕ ಸಂಬಂಧ ಇರುತ್ತದೆ ಎಂದು ಹೇಳಿದ ಬಗ್ಗೆ ಮೃತ ನವಾಜ್ ಅಥವಾ ಅವರ ತಂದೆ ಅವರಿಬ್ಬರ ವಿರುದ್ಧ ದೂರು ದಾಖಲಿಸಿದ್ದರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ, ಅದೇ ರೀತಿ ನಾನೂ ಸಹ 1 ಮತ್ತು 5 ನೇ ಆರೋಪಿತರ ವಿರುದ್ಧ ಯಾವುದೇ ದೂರು ದಾಖಲಿಸಿಲ್ಲ. 1

ಮತ್ತು 5ನೇ ಆರೋಪಿತರ ನಡುವೆ ಅನೈತಿಕ ಸಂಬಂಧ ಇದ್ದ ವಿಚಾರ ನನಗೆ ತಿಳಿಯದಿದ್ದ ಕಾರಣ ನವಾಜ್ ಇವರಿಗೆ ನಾನು ಯಾವುದೇ ಸಮಯದಲ್ಲಿ ತಿಳುವಳಿಕೆ ನೀಡಿಲ್ಲ.

8. ನವಾಜ್ ಇವರು ಮೃತಪಟ್ಟ ದಿನ ನನ್ನ ಸಂಬಂಧಿ ಜಹೀರ್ ಇವರು 1 ಮತ್ತು 5ನೇ ಆರೋಪಿತರ ನಡುವೆ ಅನೈತಿಕ ಸಂಬಂಧ ಇರುವುದಾಗಿ ನನಗೆ ತಿಳಿಸಿರುತ್ತಾರೆ. ಸದರಿ ಜಹೀರ್ ಇವರು Whitefield ನಲ್ಲಿ ವಾಸ ಇದ್ದು ಜೀವಂತ ಇರುತ್ತಾರೆ. ಘಟನೆ ರಾತ್ರಿ ಆಗಿದ್ದು, ಮಾರನೆ ದಿನ ಬೆಳಿಗ್ಗೆ ಜಹೀರ್ ಇವರು 1 ಮತ್ತು 5ನೇ ಆರೋಪಿತರ ಸಂಬಂಧವನ್ನು ನನಗೆ ತಿಳಿಸಿರುತ್ತಾರೆ. ಜಹೀರ್ ಇವರಿಂದ ವಿಚಾರ ತಿಳಿದುಬಂದ ನಂತರ ನಾನು ಪೋಲೀಸರಿಗೆ ಯಾರುವುದೇ ದೂರು ದಾಖಲಿಸಿಲ್ಲ ಕಾರಣ ನನ್ನ ಅಣ್ಣ ದೂರು ದಾಖಲಿಸಿದ್ದರು. ನಮ್ಮ ಮನೆಯಿಂದ ಕುದುರೆ ಮುಖದಲ್ಲಿರುವ ಭದ್ರಾನದಿಗೆ ಅಂದಾಜು 300-400 ಕಿ.ಮೀ. ದೂರ ಇರುತ್ತದೆ. ಆ ದಿನ ನಾನು ಪೋಲೀಸ್ ಠಾಣೆಗೆ ಬೆಳಿಗ್ಗೆ 06:00 ಗಂಟೆಗೆ ಹೋಗಿದ್ದು, ಠಾಣೆಯನ್ನು ಎಷ್ಟು ಗಂಟೆಗೆ ಬಿಟ್ಟಿರುತ್ತೇವೆಂದು ನನಗೆ ನೆನಪಿಲ್ಲ. ನಾವು ಕುದುರೆ ಮುಖ ಭದ್ರಾನದಿಯ ಬಳಿ ಆ ದಿನ ರಾತ್ರಿ 07:00 ಅಥವಾ 08:00 ಗಂಟೆಗೆ ತಲುಪಿರುತ್ತೇವೆ. ನಾವು ಸದರಿ ಸ್ಥಳಕ್ಕೆ ಹೋದಾಗ ಜನರು ಹಾಗೂ ಪೋಲೀಸರು ಹಾಜರಿದ್ದು, ಎಷ್ಟು ಜನ ಪೋಲೀಸರು ಇದ್ದರು ಎಂದು ನನಗೆ ತಿಳಿದಿಲ್ಲ. ಆದರೆ ಅಂದಾಜು ಸಾರ್ವಜನಿಕರು ಹಾಗೂ ಪೋಲೀಸರು 10-15 ಜನರು ಇದ್ದರು.

9. ಆ ದಿನ ನೀರು ಹರಿಯುತ್ತಿದ್ದು, ಎಷ್ಟು ಅಡಿ ಆಳ ಇತ್ತು ಎಂದು ನನಗೆ ತಿಳಿದಿಲ್ಲ. ನಾವು ನೋಡಿದಾಗ ಮೃತ ದೇಹ ಸಂಪೂರ್ಣವಾಗಿ ಕೊಳೆತಿತ್ತು ಎಂದರೆ ಸರಿ. ಸಾಮಾನ್ಯವಾಗಿ ಮೃತ ದೇಹ ಕೊಳೆತಿದ್ದು, ಚರ್ಮ ಹೋಗಿದ್ದು, ಕೂದಲು ಇಲ್ಲದಿದ್ದಲ್ಲಿ ಅದನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಹಾಗೂ ಚಾಸಾ.1 ರವರು ಪ್ರತ್ಯೇಕವಾಗಿ ಭದ್ರಾನದಿಯ ಬಳಿ ಕಾರಿನಲ್ಲಿ ಹೋಗಿದ್ದು, ಸದರಿ ಕಾರಿನ ನಂಬರ್ ನನಗೆ ನೆನಪಿಲ್ಲ. ಆ ದಿನ ನಮ್ಮ ಮುಂದೆ ಪೋಲೀಸ್ ನವರು ವಾಹನದಲ್ಲಿ ಹೋಗಿದ್ದು, ಇಬ್ಬರೂ ಜೊತೆಯಾಗಿ ಸ್ಥಳೀಯ ಪೋಲೀಸ್ ಠಾಣೆಗೆ ಹೋಗಿ ನಂತರ ಭದ್ರಾನದಿಯ ಬಳಿ ಹೋಗಿರುತ್ತೇವೆ. ನಂತರ ಸ್ಥಳೀಯ ಪೋಲೀಸರು ನಮ್ಮನ್ನು ಭದ್ರಾನದಿಯ ಬಳಿ ಕರೆದುಕೊಂಡು ಹೋಗಿರುತ್ತಾರೆ.

10. ನಮ್ಮ ಮುಂದೆ ಸದರಿ ಸ್ಥಳದಲ್ಲಿ ಯಾವುದೇ ಬರವಣಿಗೆ ಆಗಿಲ್ಲ ಎಂದರೆ ಸಾಕ್ಷಿಯು ಫೋಟೋಗಳನ್ನು ತೆಗೆಸಿ, ಬರವಣಿಗೆ ಮಾಡಿದ್ದರು ಎಂದು ನುಡಿದಿರುತ್ತಾರೆ. ನಾವು ಸದರಿ ಸ್ಥಳಕ್ಕೆ ಹೋದ ಸಮಯದಲ್ಲಿ ಸ್ವಲ್ಪ ಮಳೆ ಇತ್ತು. ನಾನು ಹೇಳಿದಂತಹ ಬರವಣಿಗೆಗೆ ಯಾರಾದರು ಸಹಿ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಪೋಲೀಸರು ಸ್ಥಳದಲ್ಲಿ ಏನೋ ಬರೆದುಕೊಳ್ಳುತ್ತಿದ್ದು, ಅದು ಏನು ಎಂದು ನನಗೆ ತಿಳಿದಿಲ್ಲ. ಪೋಲೀಸರು ಸದರಿ ಸ್ಥಳದಲ್ಲಿ ಸಹಿ ಮಾಡಲು ತಿಳಿಸಿದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಮೃತ ದೇಹ ನೋಡಿದ ನಂತರ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ನಾನು ಆ ಸ್ಥಳದಲ್ಲಿ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಮೃತ ದೇಹದ ಪ್ಯಾಂಟ್ ಬೆಲ್ಟ್ ನಲ್ಲಿ ಕೀ ಚೈನ್ ಇತ್ತು ಎಂದು

ಹೇಳಿದ್ದು, ಅದರ ನಂಬರ್ ಅನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮೃತ ದೇಹದ ಪ್ಯಾಂಟ್ ಬೆಲ್ಟ್ ನಲ್ಲಿ 4-5 ಕೀಗಳು ಇದ್ದು, ಅದರಲ್ಲಿ ಕ್ಯಾಂಟರ್ ಕೀ, ದ್ವಿಚಕ್ರ ವಾಹನದ ಕೀ, ಸೂಟ್ ಕೇಸ್ ಇದ್ದು, ಉಳಿದ ಕೀಗಳ ಬಗ್ಗೆ ನನಗೆ ತಿಳಿದಿಲ್ಲ. ಪೋಲೀಸರು ಸದರಿ ಕೀಗಳನ್ನು ವಶಪಡಿಸಿಕೊಂಡಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಪೋಲೀಸರು ಕೀಗಳನ್ನು ತೆಗೆದುಕೊಂಡ ಬಗ್ಗೆ ಪ್ರತ್ಯೇಕ ಮಹಜರ್ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಚಾಸಾ.1 ರವರು ಅಬ್ದುಲ್ ರೆಹಮಾನ್ ಇವರ ಬಳಿ ಕಾರ್ ಚಾಲಕರಾಗಿ ಘಟನೆ ಆಗಿರುತ್ತದೆ ಎಂದು ಹೇಳಿದ ಸಮಯದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನವಾಜ್ ಇವರು ಚಾಲಕ ವೃತ್ತಿ ಮಾಡುತ್ತಿದ್ದು, ಅವರಿಗೆ ಎಷ್ಟು ಜನ ಸ್ನೇಹಿತರು ಹಾಗೂ ವೈರಿಗಳು ಇದ್ದರು ಎಂದು ನನಗೆ ತಿಳಿದಿಲ್ಲ. ನವಾಜ್ ಇವರು ಎಷ್ಟು ಜನರಿಗೆ ಸಾಲ ನೀಡಿದ್ದರು, ಎಷ್ಟು ಜನರಿಂದ ಸಾಲ ಪಡೆದಿದ್ದರು, ಆತನ ವ್ಯಯಕ್ತಿಕ ವ್ಯವಹಾರಗಳು ನನಗೆ ತಿಳಿದಿಲ್ಲ ಎಂದರೆ ಸರಿ.

11. ಮೃತ ನವಾಜ್ ಹಾಗೂ 5ನೇ ಆರೋಪಿ ಅನ್ಯೋನ್ಯವಾಗಿದ್ದರು ಎಂದರೆ ನನಗೆ ತಿಳಿದಿಲ್ಲ. 1 ನೇ ಆರೋಪಿ ನಮ್ಮನ್ನು ಚಿಂತಾಮಣಿ ATM ಸೆಂಟರ್ ಗೆ ಕರೆದುಕೊಂಡು ಹೋಗಿರಲಿಲ್ಲ, ಅಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿರಲಿಲ್ಲ ಎಂದರೆ ಸರಿಯಲ್ಲ. ವರ್ತೂರು ಪೋಲೀಸರು ಭದ್ರಾನದಿಯ ಬಳಿ ಬಂದಂತಹ ಜೀಪ್ ಸಂಖ್ಯೆ ನನಗೆ ತಿಳಿದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ "ಕಾರ್ಡ್ ಹೊರಗೆ

ತೆಗೆದು ನಂತರ ಚಿಂತಾಮಣಿ ಎ.ಟಿ.ಎಮ್. ಸೆಂಟರ್ ಗೆ ಹೋಗಿ 400/- ರೂ ಹಣವನ್ನು ಬಿಡಿಸಿರುವುದಾಗಿ ಪೋಲೀಸರಿಗೆ ತಿಳಿಸಿದ್ದರು. ಅದಕ್ಕೂ ಮೊದಲು ಮೃತ ದೇಹವನ್ನು ಕುದುರೆ ಮುಖ ಭದ್ರಾನದಿ ನೀರಿಗೆ ಎಸೆದಿದ್ದರು. ಮೃತರ ಎ.ಟಿ.ಎಮ್. ಕಾರ್ಡ್ ಗೆ ಸಂಬಂಧಿಸಿದ password ಅನ್ನು 5 ನೇ ಆರೋಪಿ 1 ನೇ ಆರೋಪಿಗೆ ತಿಳಿಸಿದ್ದರು" ಎಂದು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪೋಲೀಸರ ಮುಂದೆ "ಎ.ಟಿ.ಎಮ್. ಇದ್ದ ಜಾಗವನ್ನು 1 ಮತ್ತು 3 ನೇ ಆರೋಪಿ ಪೋಲೀಸರಿಗೆ ತೋರಿಸಿರುತ್ತಾರೆ. ಮೃತನ ದೇಹದಲ್ಲಿ ಒಂದು ಕೀ ಚೈನ್, ಮೊಬೈಲ್ ಹಾಗೂ ಪರ್ಸ್ ಸಿಕ್ಕಿದ್ದು, ಅವುಗಳ ಪೈಕಿ ಮೊಬೈಲ್ ಹಾಗೂ ಪರ್ಸ್ ಅನ್ನು ಕುದುರೆಮುಖ ಭದ್ರಾನದಿ ನೀರಿನಲ್ಲಿ ಶವ ಬಿಸಾಡಿ ಬರುವಾಗ ಸದರಿ ವಸ್ತುಗಳನ್ನು ನದಿಗೆ ಎಸೆದಿರುತ್ತಾರೆ" ಎಂದು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

12. ಸದರಿ ಕೊಲೆಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ, ಆರೋಪಿತರು ನಾನು ಹೇಳಿದಂತೆ ಭದ್ರಾನದಿಯ ಬಳಿ ಬಾರದೇ ಇದ್ದರೂ ಸಹ ಪೋಲೀಸರ ಮಾತು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನವಾಜ್ ಇವರು 5 ನೇ ಆರೋಪಿಯನ್ನು ಮದುವೆ ಆಗುವ ಪೂರ್ವದಲ್ಲಿ ಮತ್ತೊಂದು ಮದುವೆ ಆಗಿದ್ದರು ಎಂದರೆ ಸರಿ. ಮೊದಲನೆ ಹೆಂಡತಿಗೆ ನವಾಜ್ ವಿಚ್ಛೇದನ ನೀಡಿರುವುದಿಲ್ಲ ಎಂದರೆ ಸರಿ. ಮೊದಲನೆ ಹೆಂಡತಿ ಈಗಲೂ ಜೀವಂತ ಇರುತ್ತಾರೆ. ಮೊದಲನೆ ಹೆಂಡತಿ ಜೀವಂತ ಇರುವ ಸಮಯದಲ್ಲಿ ನವಾಜ್ 5 ನೇ ಆರೋಪಿಯನ್ನು ಪ್ರೀತಿಸಿ ಮದುವೆ ಆಗಿದ್ದರು ಎಂದರೆ ನನಗೆ ತಿಳಿದಿಲ್ಲ.

ತುಂಗಭದ್ರ ನದಿಯ ಬಳಿ ಬಂದಿದ್ದ ಪೋಲೀಸ್ ಜೀಪ್ ನಲ್ಲಿ ಎಷ್ಟು ಜನ ಪೋಲೀಸರು ಇದ್ದರು ಎಂದು ನನಗೆ ತಿಳಿದಿಲ್ಲ, ಆದರೆ ಸರ್ಕಲ್ ಸಾಹೇಬರು ಇದ್ದರು. ಪೋಲೀಸರು ಬಂದ ಜೀಪಿನಲ್ಲಿ ಪೋಲೀಸರನ್ನು ಬಿಟ್ಟು ಬೇರೆ ಯಾರು ಇದ್ದರು ಎಂದು ನನಗೆ ತಿಳಿದಿಲ್ಲ.

**ಮರುವಿಚಾರಣೆಃಇಲ್ಲ**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.